# ಬಾಂಗ್ಲಾದೇಶದಿಂದ ಹಿಂದಿರುಗಿದ ಭಾರತೀಯ ಪ್ರಜೆಗಳ ವಿವರ (ಜುಲೈ 21, 2024)

ಜುಲೈ 21, 2024

ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಢಾಕಾದಲ್ಲಿರುವ ಹೈಕಮಿಷನ್ ಹಾಗೂ ಚಿತ್ತಗಾಂಗ್, ರಾಜ್‌ಶಾಹಿ, ಸಿಲ್ಹೆಟ್, ಖುಲ್ನಾದಲ್ಲಿರುವ ಸಹಾಯಕ ಹೈಕಮಿಷನ್‌ಗಳು ಭಾರತೀಯ ಪ್ರಜೆಗಳನ್ನು ಬಾಂಗ್ಲಾದೇಶದಿಂದ ವಾಪಸ್ ಕರೆಸಲು ಕಳೆದ ಎರಡು ದಿನಗಳಿಂದ ನಿರಂತರವಾಗಿ ಸಹಾಯ ಮಾಡುತ್ತಿವೆ. ಭೂ, ಬಂದರು ಹಾಗೂ ವಿಮಾನ ನಿಲ್ದಾಣ ಮಾರ್ಗವಾಗಿ ಸುಗಮವಾಗಿ ಸಂಚರಿಸಲು ಸಾಧ್ಯವಾಗುವಂತೆ ಅನುವು ಮಾಡಿಕೊಡಲು ವಿದೇಶಾಂಗ ವ್ಯವಹಾರಗಳ ಸಚಿವರು ಭಾರತೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿದ್ದಾರೆ. ಢಾಕಾದಲ್ಲಿರುವ ಹೈಕಮಿಷನ್ ಕೂಡ ಬಾಂಗ್ಲಾದೇಶದ ನಾಗರಿಕ ವಿಮಾನಯಾನ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಹಾಗೂ ವಾಣಿಜ್ಯ ವಿಮಾನಯಾನ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿದ್ದು, ಭಾರತ ಹಾಗೂ ಬಾಂಗ್ಲಾದೇಶದ ನಡುವಿನ ವಿಮಾನ ಪ್ರಯಾಣ ಲಭ್ಯತೆಗಳ ಬಗ್ಗೆ ಖಚಿತಪಡಿಸಿಕೊಳ್ಳುತ್ತಿದ್ದಾರೆ.

2. ಇದುವರೆಗೆ ಸುಮಾರು 4500 ಭಾರತೀಯ ವಿದ್ಯಾರ್ಥಿಗಳು ಭಾರತಕ್ಕೆ ಹಿಂತಿರುಗಿದ್ದಾರೆ. ಗಡಿ ಪ್ರದೇಶಗಳಲ್ಲಿ ಭಾರತೀಯ ಪ್ರಜೆಗಳ ಸುರಕ್ಷಿತ ಪ್ರಯಾಣ ಹಾಗೂ ಭದ್ರತೆಗಾಗಿ ಹೈಕಮಿಷನ್ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಿದೆ. ನೇಪಾಳದ 500, ಭೂತಾನ್‌ನ 38 ಹಾಗೂ ಮಾಲ್ದೀವ್ಸ್‌ನ ಒಂದು ವಿದ್ಯಾರ್ಥಿ ಭಾರತಕ್ಕೆ ಆಗಮಿಸಿದ್ದಾರೆ. ಭಾರತೀಯ ಪ್ರಜೆಗಳ ಭದ್ರತೆ ಹಾಗೂ ಸುರಕ್ಷತೆಯನ್ನು ದೃಢಪಡಿಸಿಕೊಳ್ಳಲು ಹೈಕಮಿಷನ್ ಮತ್ತು ನಮ್ಮ ಸಹಾಯಕ ಹೈಕಮಿಷನ್‌ಗಳು ಅಲ್ಲಿಯ ಸ್ಥಳೀಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಜೊತೆಗೆ, ಭಾರತೀಯ ಪ್ರಜೆಗಳ ಕಲ್ಯಾಣ ಹಾಗೂ ಸಹಾಯಕ್ಕಾಗಿ ಬಾಂಗ್ಲಾದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿರುವ ವಿದ್ಯಾರ್ಥಿಗಳೊಂದಿಗೂ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿದ್ದಾರೆ.

3. ಢಾಕಾದಲ್ಲಿರುವ ಹೈಕಮಿಷನ್ ಹಾಗೂ ಬಾಂಗ್ಲಾದೇಶದಲ್ಲಿರುವ ಭಾರತದ ಸಹಾಯಕ ಹೈಕಮಿಷನ್‌ಗಳು ಭಾರತೀಯ ಪ್ರಜೆಗಳಿಗೆ ಅಗತ್ಯ ಸಹಾಯ ಮಾಡಲು ಈ ಕೆಳಗೆ ಪಟ್ಟಿಮಾಡಲಾಗಿರುವ ತುರ್ತು ಸಂಪರ್ಕ ಸಂಖ್ಯೆಯಲ್ಲಿ ಲಭ್ಯರಿರುತ್ತಾರೆ.

ಭಾರತದ ಹೈಕಮಿಷನ್, ಢಾಕಾ
+880-1937400591

ಭಾರತದ ಸಹಾಯಕ ಹೈಕಮಿಷನ್, ಚಿತ್ತಗಾಂಗ್
+880-1814654797 / +880-1814654799

ಭಾರತದ ಸಹಾಯಕ ಹೈಕಮಿಷನ್, ರಾಜ್‌ಶಾಹಿ
+880-1788148696

ಭಾರತದ ಸಹಾಯಕ ಹೈಕಮಿಷನ್, ಸಿಲ್ಹೆಟ್

+880-1313076411
+880-1313076417

ಭಾರತದ ಸಹಾಯಕ ಹೈಕಮಿಷನ್, ಖುಲ್ನಾ

+880-1812817799

**ನವದೆಹಲಿ**

**ಜುಲೈ 21, 2024**